# ಉಪನಿಷತ್ತುಗಳಲ್ಲಿ ಗುರು-ಶಿಷ್ಯ ಪರಂಪರೆ

**ರಾಜೇಶ್ವರಿ ಕೃಷ್ಣ**

ಭಾರತದ ಆಧ್ಯಾತ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಗುರು-ಶಿಷ್ಯ ಪರಂಪರೆಗೆ ವಿಶೇಷವಾದ ಮಹತ್ವವಿದೆ. ವೇದಕಾಲದಿಂದಲೂ ಆರಂಭವಾದ ಈ ಪರಂಪರೆ ಇಂದಿನವರೆಗೂ ಅನೂಚಾನವಾಗಿ ಮುಂದುವರಿದುಕೊಂಡು ಬಂದಿದೆ. ಉಪನಿಷತ್ತುಗಳಲ್ಲಿ ಕಂಡುಬರುವ ಗುರು-ಶಿಷ್ಯ ಪರಂಪರೆಯ ಬಗ್ಗೆ ಇಲ್ಲಿ ವಿವರಿಸಲಾಗಿದೆ. ಲೇಖಕಿ ಬೆಂಗಳೂರು ನಿವಾಸಿ; ಸಂಸ್ಕೃತ ಹಾಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಭಾರತೀಯ ಸಂಸ್ಕೃತಿ-ಸನಾತನ ಧರ್ಮ ಹಾಗು ಆಧ್ಯಾತ್ಮಿಕ ಜೀವನದಲ್ಲಿ ಗುರುಪರಂಪರೆ, ಗುರು-ಶಿಷ್ಯ ಸಂಬಂಧ, ಮಹತ್ವದ ಸ್ಥಾನ ಪಡೆದಿದೆ. ನಮ್ಮ ಇತಿಹಾಸ-ಪುರಾಣಗಳಲ್ಲಿ, ಸಾಹಿತ್ಯ-ಸಂಗೀತ, ವೇದ-ವೇದಾಂತದಲ್ಲಿ ಗುರುವಿಲ್ಲದೆ ಶಿಷ್ಯರಿಲ್ಲ, ಶಿಷ್ಯರಿಲ್ಲದೆ ಗುರುವಿಲ್ಲ. ನಮ್ಮ ಋಷಿ-ಮುನಿಗಳು, ವಚನಕಾರ-ವಾಗ್ಗೇಯಕಾರರು ಗುರುವಿನ ಮಹಿಮೆಯನ್ನೂ, ಶಿಷ್ಯನ ಸಂಪನ್ನತೆಯನ್ನು ಬಹಳಷ್ಟು ವರ್ಣಿಸಿದ್ದಾರೆ, ಸ್ತುತಿಸಿದ್ದಾರೆ. ಶ್ರೀ ಶಂಕರಾಚಾರ್ಯರು, **'ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ ತತಃ ಕಿಂ ತತಃ ಕಿಂ'** ('ಗುರುವಿನ ಪಾದಪದ್ಮದಲ್ಲಿ ಮನಸ್ಸನ್ನು ಇಡದಿದ್ದರೆ ಏನು ತಾನೆ ಸಾಧ್ಯವಾದೀತು?') ಎಂದಿದ್ದಾರೆ. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮ ಪಿತಾಮಹರು ಯುಧಿಷ್ಠಿರನಿಗೆ **'ಗುರುರ್ಗರೀಯಾನ್ ಪಿತೃತೋ ಮಾತೃತಶ್ಚೇತಿ ಮೇ ಮತಿಃ'** ('ಗುರುವು ತಂದೆ-ತಾಯಿಗಿಂತ ಶ್ರೇಷ್ಠರು') *(ಮಹಾ.ಶಾಂತಿ.೧೦೮.೧೮)* ಎಂದು ತಿಳಿಯಹೇಳುತ್ತಾರೆ. ಭಗವದ್ಗೀತೆ, 'ವಿವೇಕಚೂಡಾಮಣಿ' ಹಾಗೂ ಹಲವಾರು ಪ್ರಕರಣ ಗ್ರಂಥಗಳಲ್ಲಿ ಸದ್ಗುರುವಿನ ಮಹತ್ವ - ಶಿಷ್ಯ ಸಂಪನ್ನತೆ ಯನ್ನು ವಿವರಿಸುವ ಅನನ್ಯವಾದ ಶ್ಲೋಕಗಳಿವೆ.

ಯಾವುದೇ ಕ್ಷೇತ್ರದಲ್ಲಿ ಉತ್ತಮ ಗುರುವನ್ನಿಟ್ಟುಕೊಂಡು, ಗುಣಮಟ್ಟದ ಕಾರ್ಯಾಚರಣೆ ನಡೆಸಬೇಕಾದರೆ ಸೂಕ್ತ ಮಾರ್ಗದರ್ಶನ-ಪೂರ್ವಸಿದ್ಧತೆ ಹಾಗೂ ತಕ್ಕ ಸಾಧನೆ-ಪರಿಶ್ರಮ ಅತ್ಯಗತ್ಯ. ಅಧ್ಯಾತ್ಮದಲ್ಲಿ 'ಗುರು' ಎಂಬ ಶಬ್ದಕ್ಕೆ ವಿಶೇಷವಾದ, ಸೂಕ್ಷ್ಮವಾದ ಅರ್ಥವಿದೆ. 'ಗುರು' ಎಂಬ ಶಬ್ದಕ್ಕೆ ಸಮಾನ ಅರ್ಥದಲ್ಲಿ ಆಚಾರ್ಯ, ಉಪಾಧ್ಯಾಯ, ಪ್ರಾಧ್ಯಾಪಕ ಎಂಬ ಶಬ್ದಗಳೂ ಇವೆ. 'ಗು' ಎಂದರೆ ಅಂಧಕಾರ ಅಥವಾ ಕತ್ತಲೆ; 'ರು' ಎಂದರೆ ನಾಶ ಮಾಡುವವನು. ಕತ್ತಲೆ ಅಜ್ಞಾನದ ಪ್ರತೀಕ; ಬೆಳಕು ಜ್ಞಾನದ ಸಂಕೇತ. ಗುರುವಾದವನು ಶಿಷ್ಯರನ್ನು ಅಜ್ಞಾನವೆಂಬ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುತ್ತಾನೆ : **'ತಮಸೋ ಮಾ ಜ್ಯೋತಿರ್ಗಮಯ...'** ಹಾಗೆಯೇ ಆಚಾರ್ಯ ಎಂದರೆ **'ಶಾಸ್ತ್ರಾಣಿ ಸ್ವಯಮಾಚರತೇ ಇತಿ ಆಚಾರ್ಯಃ ।'** ಶಾಸ್ತ್ರಗಳನ್ನೆಲ್ಲ ಸಂಪೂರ್ಣವಾಗಿ ಅಧ್ಯಯನ ಮಾಡಿ, ತಾನೂ ಸದಾಚಾರ ಸಂಪನ್ನನಾಗಿರುವವನು. 'ಶಿಷ್ಯ ಎಂದರೆ ಶಿಷ್ಟನಾಗಿರುವನು - ಗುರುವಿನ ಉಪದೇಶದೊಂದಿಗೆ ನಿರಂತರ ಅಧ್ಯಯನ, ಅಭ್ಯಾಸ ಹಾಗೂ ಶಿಸ್ತನ್ನು ಅಳವಸಿಡಿಕೊಂಡಿರುವವನು. ನಮ್ಮ ಗುಣ-ದೋಷಗಳನ್ನು ತಿದ್ದಿ, ಉತ್ತಮ ಗುರಿಯೊಂದಿಗೆ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಸಾಮರ್ಥ್ಯ ಸದ್ಗುರುಗಳಿಗಿರುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು "ಗುರುವಿನ ಸಹಾಯವಿಲ್ಲದೆ ಭಗವಂತನ ದರ್ಶನ ಸಾಧ್ಯವಿಲ್ಲ." ಎಲ್ಲ ಮಹಾತ್ಮರೂ, ಸಂತರೂ, ಅವತಾರ ಪುರುಷರೂ ಗುರುಗಳನ್ನು ಆಶ್ರಯಿಸಿಯೇ ಜ್ಞಾನ ಪಡೆದರು. ಅವತಾರ ಪುರುಷನಾದ ಶ್ರೀಕೃಷ್ಣ ಸಾಂದೀಪನಿ ಋಷಿಯನ್ನೂ ರಾಮಚಂದ್ರ ವಸಿಷ್ಠರನ್ನೂ ಆಶ್ರಯಿಸಿ ವಿದ್ಯೆ ಪಡೆದದ್ದನ್ನೂ, ಶ್ರೀರಾಮಕೃಷ್ಣರು ತೋತಾಪುರಿಯಿಂದ ಉಪದೇಶ ಪಡೆದದ್ದನ್ನೂ ಸ್ಮರಿಸಬಹುದು. ಶ್ರೀರಾಮಕೃಷ್ಣರಂಥ ಅಸಾಧಾರಣ ಗುರುವಿನ ನೆಲೆಯಲ್ಲಿ ನರೇಂದ್ರ, ಸ್ವಾಮಿ ವಿವೇಕಾನಂದರಾಗಿ ಪರಿವರ್ತನೆಯಾದದ್ದನ್ನು ನೆನಪಿಸಿಕೊಳ್ಳಬಹುದು.

ಆಷಾಢ ಮಾಸದ ಹುಣ್ಣಿಮೆಯಂದು ಅಧ್ಯಾತ್ಮ ಸಾಧಕರು ವಿಶೇಷವಾಗಿ ಗುರುಗಳನ್ನು ಪೂಜಿಸುವ, ಗುರುಪರಂಪರೆಯನ್ನು ವಂದಿಸುವ ಪದ್ಧತಿ ಇದೆ. ಇದೇ 'ಗುರುಪೂರ್ಣಿಮ'. ಹುಣ್ಣಿಮೆಯ ಚಂದ್ರನಂತೆ ಸದ್ಗುರುವು ಕೂಡ ಪ್ರಕಾಶಮಾನವಾಗಿ, ಪೂರ್ಣವಾಗಿದ್ದುಕೊಂಡು, ಜ್ಞಾನದ ಬೆಳಕನ್ನು ನೀಡುತ್ತಾನೆ ಎಂಬುದು ಒಂದು ಸೂಚನೆ. 'ಗುರುಪೂರ್ಣಿಮೆ'ಯನ್ನು 'ವ್ಯಾಸಪೂರ್ಣಿಮೆ' ಎಂದೂ ಆಚರಿಸುವುದುಂಟು. ಬ್ರಹ್ಮವಿದ್ಯಾ ಸಂಪ್ರದಾಯದ ಗುರುಪರಂಪರೆಗೆ ನಾಂದಿ ಹಾಡಿ, ತಮ್ಮ ಜ್ಞಾನ ಪ್ರಕಾಶದಿಂದ ಪ್ರಸಿದ್ಧಿ ಪಡೆದ ಮಹರ್ಷಿ ವೇದವ್ಯಾಸರು ಜನ್ಮ ತಳೆದದ್ದು ಇದೇ ದಿನ. ಸಂಕೀರ್ಣವಾಗಿದ್ದ ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ, ತಮ್ಮ ಶಿಷ್ಯರಿಗೆ ಹಂಚಿ ಕಾಪಾಡಲು ಶ್ರಮಿಸಿದ, ಹದಿನೆಂಟು ಪುರಾಣಗಳನ್ನೂ, ಮಹಾಭಾರತವನ್ನೂ ಬರೆದು, ಬ್ರಹ್ಮಸೂತ್ರಗಳನ್ನು ರಚಿಸಿದ ಕೀರ್ತಿ-ಶ್ರೇಯಸ್ಸು ಭಗವಾನ್ ಶ್ರೀವೇದವ್ಯಾಸರಿಗೆ ಸಲ್ಲುತ್ತದೆ.

ವೇದಗಳ ಕೊನೆಯ ಭಾಗದಲ್ಲಿ ಬರುವುದೇ ಭಾರತೀಯ ತತ್ತ್ವಶಾಸ್ತ್ರದ ಮೇರುಶಿಖರಗಳೆನಿಸಿರುವ ಉಪನಿಷತ್ತುಗಳು ಅಥವಾ 'ವೇದಾಂತ'. ಉಪನಿಷತ್ತುಗಳು ಪ್ರತಿಪಾದಿಸುವಂತೆ, ಇರುವುದು

ಒಂದೇ ಪರಮಾತ್ಮ ತತ್ತ್ವ – ಅದೇ ಪರಬ್ರಹ್ಮ–ಪರಮಾತ್ಮ–ಚೈತನ್ಯ. ಈ ಚೈತನ್ಯವೇ ನಾಮರೂಪಗಳಾಗಿ ತೋರಿಕೊಂಡು ಪ್ರಪಂಚವಾಗಿ ಪರಿಣಮಿಸಿದೆ; ಜ್ಞಾನ–ಸ್ವರೂಪವಾಗಿ ನಮ್ಮೊಳಗೂ (ಅಂತರ್ಯಾಮಿ ರೂಪದಿಂದ) ಸ್ಥಿತವಾಗಿದೆ. ಆದರೆ ಅತ್ಯಂತ ಸೂಕ್ಷ್ಮವಾದ ಈ ತತ್ತ್ವಾನುಸಂಧಾನ ಎಲ್ಲರಿಗೂ ಒಂದೇ ಬಾರಿಗೆ ಸುಲಭ ಸಾಧ್ಯವಿಲ್ಲ. ಇದಕ್ಕಾಗಿ ಸದ್ಗುರುವಿನ ಮಾರ್ಗದರ್ಶನ ಸಮಗ್ರ ಸಾಧನೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಓಂಕಾರದಂಥ ಶ್ರೇಷ್ಠ ಆಲಂಬನೆಗಳು ನಾಮ–ಜಪ–ಧ್ಯಾನ–ಉಪಾಸನೆ ಹಾಗೂ ಶ್ರವಣ–ಮನನ–ನಿದಿಧ್ಯಾಸನದಂಥ ಸಾಕ್ಷಾತ್ ಸಾಧನೆಗಳು ಒದಗಿ ಬರುತ್ತವೆ. ಹೀಗಾಗಿ ಉಪನಿಷತ್ತುಗಳಲ್ಲಿ ಗುರು–ಶಿಷ್ಯ ಸಂಬಂಧಕ್ಕೆ ಬಹಳ ಪ್ರಾಮುಖ್ಯತೆ–ಉತ್ತಮ ಜನ್ಮ ದೊರಕುವುದು ಹರಿಕೃಪೆಯಿಂದ; ಜನ್ಮವೇ ಇಲ್ಲದಂತಾಗುವುದು ಗುರುಕೃಪೆಯಿಂದ. ಉಪನಿಷತ್ತುಗಳ ಪ್ರಾರಂಭದಲ್ಲಿ ಬರುವ ಶಾಂತಿಮಂತ್ರಗಳು ಸಾಮಾನ್ಯವಾಗಿ ಗುರು–ಶಿಷ್ಯರು ಒಂದುಗೂಡಿ, ನಿರಾತಂಕವಾದ ಅಧ್ಯಯನಕ್ಕಾಗಿ ಮಾಡುವ ಪ್ರಾರ್ಥನೆಯ ರೂಪದಲ್ಲಿವೆ. ಉಪನಿಷತ್ತುಗಳಲ್ಲಿ ಗಹನವಾದ ತತ್ತ್ವಬೋಧನೆಯ ಜೊತೆಯಲ್ಲಿಯೇ ಹಲವು ಸ್ವಾರಸ್ಯಕರ, ಅಪರೂಪದ ಆಖ್ಯಾಯಿಕೆ–ರೂಪಕ–ಸಂವಾದಗಳು ಬರುತ್ತವೆ. ಇಲ್ಲಿ ನಾವು ಹಲವಾರು ಗುರು–ಶಿಷ್ಯರ ಭೂಮಿಕೆಯನ್ನು ಕಾಣಬಹುದು–ಒಬ್ಬ ಗುರು ಮತ್ತು ಒಬ್ಬ ಶಿಷ್ಯನ ಸಂವಾದ ಶಿಷ್ಯರೆಲ್ಲ ಸೇರಿ ತಮ್ಮೊಳಗೆ ಚರ್ಚಿಸಿ ವಿಚಾರ ಮಾಡುವುದು, ನಂತರ ಗುರುವಿನ ಬಳಿಗೆ ಹೋಗುವುದು ಇತ್ಯಾದಿ. ಮಹರ್ಷಿಗಳು, ಮಹಾರಾಜರು, ದೇವತೆಗಳು, ಪ್ರಜಾಪತಿ (ಚತುರ್ಮುಖ ಬ್ರಹ್ಮ) ಕಡೆಗೆ ಮೃತ್ಯುದೇವತೆಯಾದ ಯಮಧರ್ಮರಾಯನೂ ಕೂಡ ಗುರುವಿನ ಪಾತ್ರದಲ್ಲಿ ಅದ್ಭುತವಾಗಿ ಬೆಳಗುತ್ತಾರೆ. ಶ್ರೋತ್ರಿಯ ಬ್ರಾಹ್ಮಣನಿಗೆ ರಾಜನೊಬ್ಬ–ಗುರು ಅಥವಾ ಚಕ್ರವರ್ತಿಯೇ ಮಹರ್ಷಿಗಳ ಶಿಷ್ಯ. ತಂದೆಯೇ ಮಗನಿಗೆ ಗುರು ಅಥವಾ ಪತ್ನಿಗೆ ಪತಿಯೇ ಗುರು. ಇವರೆಲ್ಲ ತಮ್ಮ ಜ್ಞಾನ ಮತ್ತು ಶ್ರೇಷ್ಠತೆಗಳಿಂದ ಆ ಗೌರವನ್ನು ಪಡೆದಿದ್ದರೇ ಹೊರತು ಬೇರೆ ಬಾಹ್ಯ ಸ್ಥಾನ–ಮಾನಗಳಿಂದಾಗಿ ಅಲ್ಲ. ಇಂಥ ಗುರುಗಳನ್ನು ಶಿಷ್ಯರೆಲ್ಲ ಅತ್ಯಂತ ಗೌರವದಿಂದ 'ಭಗವಃ, ಭಗವನ್, ಭಗವಂತಃ' ಎಂದು ಸಂಬೋಧಿಸುತ್ತಾರೆ. ವಿನಯಸಂಪನ್ನರೂ, ಕಾರುಣ್ಯಸಿಂಧುಗಳೂ ಆದ ಈ ಗುರುಗಳೆಲ್ಲ ಸ್ವತಃ ಯೋಗ್ಯ ಶಿಷ್ಯರಿಗಾಗಿ ಹಂಬಲಿಸುತ್ತಾರೆ. ಅಧ್ಯಯನಶೀಲರೂ ಮುಮುಕ್ಷು ಸಾಧಕರೂ ಆದ ಅರ್ಹ ಶಿಷ್ಯರನ್ನು ಕಂಡಾಗ ಸದ್ಗುರುವಿನ ಹೃದಯವೂ ಅರಳುತ್ತದೆ – ಅವರನ್ನೆಲ್ಲ ಪ್ರೀತಿಯಿಂದ 'ಹೇ ಸೋಮ್ಯ!' ಎಂದು ಕರೆಯುತ್ತಾರೆ. 'ಸೋಮ್ಯ' ಎಂದರೆ ಸೋಮವತ್ ಪ್ರಿಯದರ್ಶನಃ – ಚಂದ್ರನಂತೆ ನೋಡಲು ಪ್ರಿಯನಾದ ಶಿಷ್ಯ. ಈ ಶಿಷ್ಯರೆಲ್ಲ ಕೇಳುವ ಪ್ರಶ್ನೆಗಳು 'ಜೀವ–ಜಗತ್ತು–ಈಶ್ವರದ ಸುತ್ತಲೂ ಹೆಣೆಯಲ್ಪಟ್ಟಿರುತ್ತವೆ. ಗುರುವಿನ ಸ್ಥಾನದಿಂದ ಜ್ಞಾನಿಗಳು ನೀಡುವ ಉತ್ತರಗಳು, ಉಪನಿಷತ್ತುಗಳು ಪ್ರತಿಪಾದಿಸುವ ತತ್ತ್ವದಲ್ಲಿ, ಏಕಮೇವಾದ್ವಿತೀಯವಾದ ಪರಮಾತ್ಮನಲ್ಲಿ ಕೇಂದ್ರಿತವಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ಕೆಲವು ಪ್ರಧಾನ ಉಪನಿಷತ್ತುಗಳ ಭಾಗಗಳನ್ನು ಪರಿಚಯಾತ್ಮಕವಾಗಿ ನೋಡಬಹುದು. ಕೃಷ್ಣಯಜುರ್ವೇದಕ್ಕೆ ಸೇರಿದ ತೈತ್ತಿರೀಯೋಪನಿಷತ್ತಿನ ಮೊದಲನೆಯ ಭಾಗವಾದ 'ಶೀಕ್ಷಾವಲ್ಲಿ'ಯಲ್ಲಿ ವೇದಾಧ್ಯಾಯಿಯಾದ ಶಿಷ್ಯನು ಯಶಸ್ವಿಗಾಗಿ, ಬ್ರಹ್ಮವರ್ಚಸ್ವಿಗಾಗಿ ಮಾಡುವ ಪ್ರಾರ್ಥನೆಗಳಿವೆ. ಈ ವಲ್ಲಿಯ ಕೊನೆಯಲ್ಲಿ ಸುಪ್ರಸಿದ್ಧವಾದ ''ಘಟಿಕೋತ್ಸವ ಸಂದೇಶ'' ಅಥವಾ ಅನುಶಾಸನ ಶ್ರುತಿ (ನಿಯಮದಿಂದ ಮಾಡಬೇಕಾಗಿರುವ ಕರ್ಮಗಳು) ಇದೆ. ವೇದಾಧ್ಯಯನ ಮುಗಿಸಿ, ಗುರುಕುಲದಿಂದ ಅಪ್ಪಣೆ ಪಡೆದು ಹೊರಟಿರುವ ಶಿಷ್ಯನಿಗೆ ಆಚಾರ್ಯ ನೀಡುವ ಉಪದೇಶ ಅಥವಾ ಮಾರ್ಗಸೂಚಿ – **ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ಮಾಪ್ರಮದಿತವ್ಯಮ್** ('ಸತ್ಯವನ್ನು ಹೇಳು; ಧರ್ಮವನ್ನು ಆಚರಿಸು, ಅಧ್ಯಯನವನ್ನು ಬಿಡಬೇಡ...') ಈ ಉಪನಿಷತ್ತಿನ ಮೂರನೆಯ ಹಾಗೂ ಕೊನೆಯ ಭಾಗ 'ಭೃಗುವಲ್ಲಿ'; ಇದರಲ್ಲಿ ಭೃಗು ಎಂಬ ಶಿಷ್ಯ ತನ್ನ ತಂದೆಯಾದ ವರುಣನ ಬಳಿಗೆ ಬಂದು, ''ನನಗೆ ಬ್ರಹ್ಮದ ಬಗ್ಗೆ ತಿಳಿಸಿಕೊಡಿ'' ಎಂದು ಪ್ರಾರ್ಥಿಸುತ್ತಾನೆ. ತಂದೆಯಾದ ವರುಣನು ಮಗನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಾನೆ. ಈ ಬ್ರಹ್ಮವಿದ್ಯೆಯು ಭೃಗುವಿಗೆ ನೀಡಿದ ಉಪದೇಶವಾದದ್ದರಿಂದ 'ಭಾರ್ಗವೀ' ಎಂದೂ ವರುಣನಿಂದ ಉಪದೇಶಿಸಲ್ಪಟ್ಟದ್ದರಿಂದ 'ವಾರುಣೀ' ಎಂದೂ ಪ್ರಸಿದ್ಧವಾಯಿತು. **'ಸೈಷಾ ಭಾರ್ಗವೀ ವಾರುಣೀ ವಿದ್ಯಾ ....'** ಕೃಷ್ಣಯಜುರ್ವೇದಕ್ಕೆ ಸೇರಿರುವ ಮತ್ತೊಂದು ಪ್ರಸಿದ್ಧ ಹಾಗೂ ಅತ್ಯಂತ ಆದರಣೆಯವಾದ ಉಪನಿಷತ್ತು, ಕಠೋಪನಿಷತ್. ಇದರಲ್ಲಿ ಎಂಟು ವರ್ಷದ ಬಾಲಕ ನಚಿಕೇತನೇ ಶಿಷ್ಯ; ಸಾಕ್ಷಾತ್ ಮೃತ್ಯುದೇವತೆಯಾದ ಯಮನೇ ಗುರು–ಬ್ರಹ್ಮವಿದ್ಯಾಚಾರ್ಯ. ತಂದೆಯ ಮಾತನ್ನು ಪಾಲಿಸಲು ನಚಿಕೇತ ಯಮಲೋಕಕ್ಕೆ ಹೋಗುತ್ತಾನೆ. ಯಮನು ಅವನಿಗೆ ವರಗಳನ್ನು ಅನುಗ್ರಹಿಸಿ, ಅನೇಕ ಪ್ರಲೋಭನೆಗಳನ್ನೊಡ್ಡಿದರೂ ''ನನಗೆ ಆತ್ಮಜ್ಞಾನದ ಬೋಧನೆಯೇ ಬೇಕು'' ಎಂದು ಬಾಲಕ ಹಠ ಹಿಡಿಯುತ್ತಾನೆ. ಶಿಷ್ಯನ ಯೋಗ್ಯತೆ ಯನ್ನೂ, ದೃಢಸಂಕಲ್ಪವನ್ನೂ ಮನಗಂಡು ಸಂತುಷ್ಟನಾದ ಯಮಧರ್ಮರಾಯ, ಧರ್ಮಾಧರ್ಮಗಳನ್ನು ಮೀರಿದ ಪರಬ್ರಹ್ಮ ತತ್ತ್ವವನ್ನು ಬಾಲಬ್ರಹ್ಮಚಾರಿ ನಚಿಕೇತನಿಗೆ ಸವಿಸ್ತಾರವಾಗಿ ಉಪದೇಶಿಸುತ್ತಾನೆ. ಇದೇ ಕೃಷ್ಣಯಜುರ್ವೇದಕ್ಕೆ ಸೇರಿರುವ ಶ್ವೇತಾಶ್ವತರ ಉಪನಿಷತ್ತಿನ ಕೊನೆಯಲ್ಲಿ ಗುರು–ಶಿಷ್ಯರ ಅಪೂರ್ವ ಸಂಬಂಧದ ಬಗ್ಗೆ ಸುಂದರ ಪ್ರಸ್ತಾಪವಿದೆ.

ಗಾತ್ರದಿಂದಲೂ, ವಿಷಯಸಮೃದ್ಧಿಯಿಂದಲೂ ಬೃಹತ್ತಾದದ್ದು ಶುಕ್ಲಯಜುರ್ವೇದಕ್ಕೆ ಸೇರಿರುವ ಬೃಹದಾರಣ್ಯಕೋಪನಿಷತ್. ಈ ಉಪನಿಷತ್ತಿನಲ್ಲಿ ಹಲವಾರು ಸೂಕ್ಷ್ಮ, ಸುಂದರ

ಗುರು–ಶಿಷ್ಯ ಸಂವಾದಗಳಿವೆ. ಪ್ರಜಾಪತಿಯು (ಚತುರ್ಮುಖ ಬ್ರಹ್ಮ) ತಂದೆ ಹಾಗೂ ಗುರುವಿನ ಸ್ಥಾನದಿಂದ ತನ್ನ ಮೂರು ವರ್ಗದ ಮಕ್ಕಳಿಗೆ–ದೇವತೆಗಳು, ಮನುಷ್ಯರು, ಅಸುರರು–ಉಪದೇಶ ಮಾಡುವ ಸನ್ನಿವೇಶ ಬರುತ್ತದೆ. ಜನಕ–ಯಾಜ್ಞವಲ್ಕ್ಯರ ಕಥಾ ಸಂದರ್ಭ ಬರುತ್ತದೆ. ಜನಕರಾಜನ ಕೋರಿಕೆಯ ಮೇರೆಗೆ, ಯಾಜ್ಞವಲ್ಕ್ಯ ಮಹರ್ಷಿಗಳು ಹಂತ–ಹಂತವಾಗಿ, ಎಲ್ಲಕ್ಕೂ ಸಾಕ್ಷಿಯಾದ ಆತ್ಮನ ಬಗ್ಗೆ ತಿಳಿಸಿಕೊಡುತ್ತಾರೆ. ಇದಾದ ಮೇಲೆ ಯಾಜ್ಞವಲ್ಕ್ಯ–ಮೈತ್ರೇಯಿಯ ಸೊಗಸಾದ ಸಂವಾದ ಬರುತ್ತದೆ. ಇಲ್ಲಿ ಪತಿಯೇ ಗುರು; ಪತ್ನಿಯೇ ಶಿಷ್ಯೆ. ಮೈತ್ರೇಯಿಯು ತನ್ನ ಪತಿಯಾದ ಯಾಜ್ಞವಲ್ಕ್ಯರಿಗೆ ನಮಸ್ಕರಿಸಿ, ಮೋಕ್ಷಸಾಧನವನ್ನೇ ನೀಡುವಂತೆ ಪ್ರಾರ್ಥಿಸುತ್ತಾಳೆ. ಬಹಳ ಸಂತೋಷಗೊಂಡ ಯಾಜ್ಞವಲ್ಕ್ಯರು, ''ಆತ್ಮೈವೇದಂ ಸರ್ವಂ'' –''ಆತ್ಮನೇ ಎಲ್ಲವೂ ಆಗಿದ್ದಾನೆ; ಆತ್ಮನೊಬ್ಬನನ್ನೇ ಅರಿಯ ಬೇಕು'' ಎಂದು ಆಪ್ಯಾಯಮಾನವಾಗಿ ಬೋಧಿಸುತ್ತಾರೆ.

ಸಾಮವೇದಕ್ಕೆ ಸೇರಿರುವ ಎರಡು ಪ್ರಧಾನ ಉಪನಿಷತ್ತುಗಳು, ಕೇನ ಹಾಗು ಛಾಂದೋಗ್ಯ. ಕೇನೋಪನಿಷತ್ತು, ಆಧ್ಯಾತ್ಮಿಕವಾಗಿ ಬೆಳಕು ಪಡೆದ ಸದ್ಗುರು ಹಾಗೂ ಮೇಧಾವಿಯಾದ ಶಿಷ್ಯನ ನಡುವೆ ನಡೆಯುವ ಸಂವಾದದ ರೂಪದಲ್ಲಿದೆ. ಗಾತ್ರ–ಗಹನತೆ, ವಿಷಯವ್ಯಾಪ್ತಿಯಲ್ಲಿ ವಿಶಾಲವೂ, ಪ್ರೌಢವೂ ಆದ ಛಾಂದೋಗ್ಯೋಪನಿಷತ್ತು, ಗುರು–ಶಿಷ್ಯರ ಭೂಮಿಕೆ ಇರುವ ಹಲವಾರು ಆಖ್ಯಾಯಿಕೆ–ರೂಪಕಗಳನ್ನೊಳಗೊಂಡಿದೆ. ಆತ್ಮಜ್ಞಾನಕ್ಕಾಗಿ ಪರಮಪುರುಷಾರ್ಥದ ಸಾಧನವನ್ನು ವಿನೀತರಾಗಿ ಸದ್ಗುರುವಿನ ಮೂಲಕವೇ ಪಡೆಯಬೇಕು ಎಂದು ಇವುಗಳ ಮೂಲಕ ತಿಳಿಸಿಕೊಡಲಾಗಿದೆ. ಈ ಉಪನಿಷತ್ತಿನ ಮೂರನೆಯ ಅಧ್ಯಾಯದಲ್ಲಿ ಶಾಂಡಿಲ್ಯ ಋಷಿ ಬೋಧಿಸುವ ಪ್ರಸಿದ್ಧವಾದ ''ಶಾಂಡಿಲ್ಯ ವಿದ್ಯೆ'' ಬರುತ್ತದೆ. ನಾಲ್ಕನೆಯ ಅಧ್ಯಾಯದಲ್ಲಿ ಜಾನಶ್ರುತಿ ಪೌತ್ರಾಯಣ ಎಂಬ ರಾಜನಿಗೆ, ಒಂದು ಬಂಡಿಯ ಕೆಳಗೆ ಕುಳಿತಿರುವ ರೈಕ್ವನೆಂಬ ಜ್ಞಾನಿ ಗುರುವಾಗಿ ''ಸಂವರ್ಗ ವಿದ್ಯೆ'' ಯನ್ನು ಉಪದೇಶಿಸುತ್ತಾನೆ. ಮುಂದಿನ ಅಧ್ಯಾಯಗಳಲ್ಲಿ ''ಷೋಡಶಕಲ ವಿದ್ಯೆ'', ''ಪಂಚಾಗ್ನಿ ವಿದ್ಯೆ'' ಮತ್ತು ''ವೈಶ್ವಾನರ ವಿದ್ಯೆ''ಯ ನಿರೂಪಣೆ ಇದೆ. ಆರನೆಯ ಅಧ್ಯಾಯದಲ್ಲಿ ಉದ್ದಾಲಕ ಆರುಣಿಯೇ ಗುರು; ಅವನ ಪುತ್ರ ಶ್ವೇತಕೇತು ಆರುಣಿಯೇ ಶಿಷ್ಯ. ಇದು ಸುಪ್ರಸಿದ್ಧವಾದ **ತತ್ತ್ವಮಸಿ** (ಅದು ನೀನೇ ಆಗಿದ್ದೀಯೆ') ಎಂಬ ''ಮಹಾವಾಕ್ಯ''ದ ಉಪದೇಶವನ್ನೊಳಗೊಂಡಿದ್ದು, ತಂದೆ–ಮಗನ ಸುಂದರ ಸಂವಾದವಿದೆ. ಏಳನೆಯ ಅಧ್ಯಾಯದಲ್ಲಿ ಭಗವತ್ಸ್ವರೂಪರಾದ ಸನತ್ಕುಮಾರರು ಶಿಷ್ಯರಾಗಿ ಬಂದ ನಾರದರಿಗೆ ''ಭೂಮ ವಿದ್ಯೆ'' ಅಥವಾ ಪರಬ್ರಹ್ಮವನ್ನು ಕುರಿತ ಜ್ಞಾನವನ್ನು ಬೋಧಿಸುತ್ತಾರೆ. ಎಂಟನೆಯ ಹಾಗೂ ಕೊನೆಯ ಅಧ್ಯಾಯ, ಸಾಕ್ಷಾತ್ ಪ್ರಜಾಪತಿಯು ಇಂದ್ರನಿಗೆ ನೀಡುವ ಆತ್ಮೋಪದೇಶವನ್ನೊಳಗೊಂಡಿದೆ (ದಹರ ವಿದ್ಯೆ). ಈ ಉಪನಿಷತ್ತಿನುದ್ದಕ್ಕೂ ಬ್ರಹ್ಮರ್ಷಿಗಳು, ರಾಜರ್ಷಿಗಳು, ಸಾಧಕರು ಗುರು–ಶಿಷ್ಯರ ಪಾತ್ರಗಳಲ್ಲಿ ಜೀವಂತವಾಗಿ, ಜ್ವಲಂತವಾಗಿ ಓಡಾಡಿ, ಬೆಳಗುತ್ತಾರೆ.

ಇನ್ನು ಅಥರ್ವವೇದಕ್ಕೆ ಸೇರಿರುವ ಉಪನಿಷತ್ತುಗಳಲ್ಲೂ ಗುರು–ಶಿಷ್ಯರ ಪರಂಪರೆಯನ್ನು ಕಾಣಬಹುದು. ಪ್ರಶ್ನೋಪನಿಷತ್ತಿನಲ್ಲಿ ಮೇಧಾವಿಗಳೂ, ಸಾಧಕರೂ ಆದ ಆರು ಜನ ಶಿಷ್ಯರು, ಪಿಪ್ಪಲಾದ ಮಹರ್ಷಿಗಳ ಬಳಿ ಸಾರಿ, ಪರಬ್ರಹ್ಮದ ಬಗ್ಗೆ ತಿಳಿವು ಪಡೆದುಕೊಂಡು ಕೃತಾರ್ಥರಾಗುತ್ತಾರೆ. ಮುಂಡಕೋಪನಿಷತ್ತಿನಲ್ಲಿ ಶೌನಕನೆಂಬ ಮಹಾಗೃಹಸ್ಥ ಶಿಷ್ಯ, ಅಂಗೀರಸ ಎಂಬ ಸದ್ಗುರುಗಳನ್ನು ಸಮೀಪಿಸಿ, ''ಇಡೀ ಜಗತ್ತಿಗೆ ಕಾರಣವಾಗಿರುವ ಹಾಗು ಸ್ವರೂಪವಾಗಿರುವ ಆ ಸೂಕ್ಷ್ಮಾತಿಸೂಕ್ಷ್ಮ ತತ್ತ್ವದ ಬಗ್ಗೆ ನನಗೆ ತಿಳಿಹೇಳಿ'' ಎಂದು ಕೋರುತ್ತಾನೆ. ಉತ್ತರವಾಗಿ ಸದ್ಗುರುಗಳು ಪರಾವಿದ್ಯೆ ಹಾಗು ಅಪರಾವಿದ್ಯೆಯ ಬಗ್ಗೆ ವಿವರಿಸಿ ಹೇಳುತ್ತಾರೆ. ಈ ಉಪನಿಷತ್ತಿನಲ್ಲಿ ಸದ್ಗುರುವಿನ ಲಕ್ಷಣವನ್ನೂ, ಶಿಷ್ಯನ ಯೋಗ್ಯತೆಯನ್ನು ಅತ್ಯಂತ ಸ್ಫುಟವಾಗಿ, ಮನೋಜ್ಞವಾಗಿ ನಿರೂಪಿಸಲಾಗಿದೆ. ಶಿಷ್ಯನಾದವನು ಬ್ರಹ್ಮಜ್ಞಾನಕ್ಕಾಗಿ ಸದ್ಗುರುವಿನ ಬಳಿಗೇ ಹೋಗಬೇಕು–'**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್...**' ಅತ್ಯಂತ ಮೇಧಾವಿಗಳಾದ ಋಷಿಗಳೂ ಕೂಡ ಸದ್ಗುರುಗಳ ಬಳಿಗೇ ಹೋಗುತ್ತಿದ್ದರು ಎಂಬುದಕ್ಕೆ ಉತ್ತಮ ಉದಾಹರಣೆ, ಇದೇ ಅಥರ್ವವೇದದ ಕೈವಲ್ಯೋಪನಿಷತ್. ಇದರಲ್ಲಿ ಋಗ್ವೇದದ ಪ್ರಸಿದ್ಧ ಋಷಿ ಎನಿಸಿದ ಆಶ್ವಲಾಯನ, ಬ್ರಹ್ಮವಿದ್ಯಾ ಪ್ರಾಪ್ತಿಗಾಗಿ ಚತುರ್ಮುಖ ಬ್ರಹ್ಮನ ಬಳಿಗೆ ತೆರಳುತ್ತಾನೆ. ಈ ಗುರುವಿನ ಉಪದೇಶದಲ್ಲಿ ಸಂಪೂರ್ಣ ವೇದಾಂತದ ಸಾರವೇ ಅಡಗಿದ್ದು, ಅತ್ಯಂತ ಮನನೀಯವಾಗಿದೆ.

ಕೆಲವು ಪ್ರಧಾನ ಉಪನಿಷತ್ತುಗಳಲ್ಲಿ ಬರುವ ಭೂಮಿಕೆಗಳನ್ನು ಮಾತ್ರ ಇಲ್ಲಿ ದೃಷ್ಟಾಂತದ ರೂಪದಲ್ಲಿ ನೀಡಲಾಗಿದ್ದು, ಇನ್ನೂ ಹಲವೆಡೆ ಇಂಥ ಸುಂದರ ಸನ್ನಿವೇಶಗಳು ನಮಗೆ ಕಾಣಸಿಗುತ್ತವೆ (ಈಶಾವಾಸ್ಯ, ಮಾಂಡೂಕ್ಯ, ಐತರೇಯ ಮುಂತಾದ ಉಪನಿಷತ್ತುಗಳಲ್ಲಿ ಶ್ರುತಿಯ ನೇರವಾದ ಬೋಧನೆ ಇದೆ). ಈ ಗುರುಶಿಷ್ಯರ ಸಂವಾದಗಳಲ್ಲಿ ಅಲ್ಲಲ್ಲಿ ಕಂಡು ಬರುವ ಕಾವ್ಯದ ಸೊಬಗು, ಧ್ವನಿಪೂರ್ಣತೆ, ಅಂತರಾರ್ಥಗಳು ನಮ್ಮ ಗಮನ ಸೆಳೆಯುತ್ತವೆ. ವಾಚ್ಯಾರ್ಥದಿಂದ ಸೂಚ್ಯಾರ್ಥದವರೆಗೆ ಸಾಗಿದರೆ ಉಪದೇಶ ಅರಿವಿಗೆ ಬರುತ್ತದೆ. ಮೇಲಾಗಿ, ಈ ಪಾತ್ರಧಾರಿಗಳೆಲ್ಲ ಗುರುಸ್ಥಾನದಿಂದ ಮಂಡಿಸುವ ಅಭಿಪ್ರಾಯಗಳು, ಪ್ರತಿಪಾದಿಸುವ ತತ್ತ್ವಗಳು, ನಮ್ಮ ಸಮಕಾಲೀನ ಪ್ರಜ್ಞೆಗೆ ಸಂವಾದಿಯಾಗಿವೆ. ಹೀಗಾಗಿ, ಇಂಥ ಗುರು ಉಪದೇಶ, ನಮ್ಮ ಲೌಕಿಕ ಬದುಕಿಗೆ ಆಧಾರವಾಗಿ, ಸುಸಂಸ್ಕೃತ, ಸುಸ್ಥಿರ ಸಮಾಜಕ್ಕೂ ಭದ್ರಬುನಾದಿ ಒದಗಿಸಬಲ್ಲದು : ''**ಅಸ್ಮದಾಚಾರ್ಯ ಪರ್ಯಂತಾಂ ವಂದೇ ಗುರುಪರಂಪರಾಮ್.**''



# SRI RAMAKRISHNA ADVAITA ASHRAMA

(A Branch of Ramakrishna Math, P.O. - Belur Math)
Ashrama Road, Kalady -683574, Dist. Ernakulam, Kerala
Email: kalady@rkmm.org Ph: 0484-2462345/2461071



## ನಮ್ಮ ನೌಕರರ ನಿವಾಸಗಳ ದುರಸ್ತಿ ಕಾರ್ಯಕ್ಕಾಗಿ ಆರ್ಥಿಕ ನೆರವು ನೀಡಲು ಭಕ್ತರಲ್ಲಿ ಹಾಗೂ ಹಿತೈಷಿಗಳಲ್ಲಿ ಮನವಿ

ಆತ್ಮೀಯ ಭಕ್ತರೇ ಹಾಗೂ ಹಿತೈಷಿಗಳೇ,

ನಮಸ್ತೇ.

ಕೇರಳದ ಕಾಲಡಿಯಲ್ಲಿರುವ ಶ್ರೀರಾಮಕೃಷ್ಣ ಅದ್ವೈತ ಆಶ್ರಮವು ರಾಮಕೃಷ್ಣ ಮಹಾಸಂಘದ ಅತ್ಯಂತ ಹಳೆಯ ಶಾಖಾ ಕೇಂದ್ರಗಳಲ್ಲೊಂದಾಗಿದೆ. 1936ರಲ್ಲಿ ಸ್ವಾಮಿ ಆಗಮಾನಂದರು ಶ್ರೀ ಆದಿ ಶಂಕರಾಚಾರ್ಯರ ಪವಿತ್ರ ಜನ್ಮಸ್ಥಾನದಲ್ಲಿ ಈ ಆಶ್ರಮವನ್ನು ಆರಂಭಿಸಿದರು. ಈ ಆಶ್ರಮದಲ್ಲಿ ಭಗವಾನ್ ಶ್ರೀರಾಮಕೃಷ್ಣರ ವಿಶ್ವ ಭಾವೈಕ್ಯ ಮಂದಿರ, ಕಿಂಡರ್ ಗಾರ್ಟನ್‌ನಿಂದ +2 ವರೆಗೆ ಇರುವ 'ಬ್ರಹ್ಮಾನಂದೋದಯಂ' ಶಾಲೆಗಳು, ಬಡ ವಿದ್ಯಾರ್ಥಿಗಳಿಗಾಗಿ ಗುರುಕುಲಂ ಹಾಸ್ಟೆಲ್‌ಗಳು, ಸ್ವಾಮಿ ವಿವೇಕಾನಂದ ಕಂಪ್ಯೂಟರ್ ತರಬೇತಿ ಕೇಂದ್ರ, ಹಾಗೂ ಟೈಪ್‌ರೈಟಿಂಗ್ ಕೇಂದ್ರ, ಸಾರ್ವಜನಿಕ ಗ್ರಂಥಾಲಯ — ಇವಿಷ್ಟು ಚಟುವಟಿಕೆಗಳು ನಡೆಯುತ್ತಿವೆ.



ನಮ್ಮಲ್ಲಿ ಸಮರ್ಪಣ ಭಾವದಿಂದ ಸೇವೆ ನಿರ್ವಹಿಸುವ ಸಿಬ್ಬಂದಿ ವರ್ಗದ ತಂಡವಿದ್ದು, ಹಲವರು ಆಶ್ರಮದ ಆವರಣದಲ್ಲೇ ವಾಸಿಸುತ್ತಿದ್ದಾರೆ. ದಿನದ ಎಲ್ಲ ವೇಳೆಯಲ್ಲೂ ಇಲ್ಲಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಅವರು ಸಿದ್ಧರಿರುತ್ತಾರೆ. ಇಲ್ಲಿಯವರೆಗೂ ಅವರು ಹಳೆಯ, ಜೀರ್ಣಾವಸ್ಥೆಯಲ್ಲಿರುವ ಹಂಚಿನ ಕಟ್ಟಡದಲ್ಲಿ ವಾಸಿಸುತ್ತ ಬಂದಿದ್ದಾರೆ. ಹಂಚುಗಳು ಹಳೆಯದಾಗಿದ್ದು, ಅವುಗಳ ಕೆಳಗೆ ಆಧಾರವಾಗಿರುವ ಮರದ ಪಕ್ಕಾಸುಗಳು ಕೂಡ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಕೇರಳದಲ್ಲಿ ದೀರ್ಘಕಾಲ ಧಾರಾಕಾರ ಮಳೆ ಸರ್ವೇಸಾಮಾನ್ಯ. ಆದ್ದರಿಂದ ನೌಕರರ ನಿವಾಸವನ್ನು ನಾವು ದುರಸ್ತಿ ಮಾಡಿ, ಹಂಚಿಗೆ ಸ್ಟೀಲಿನ ಫ್ಯಾಬ್ರಿಕೇಶನ್ ಮಾಡಿಸುವುದು ಅನಿವಾರ್ಯವಾಗಿದೆ.



**ಈ ಎರಡು ಕಟ್ಟಡಗಳ ದುರಸ್ತಿ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 25,00,000/- (ಇಪ್ಪತ್ತೈದು ಲಕ್ಷ ರೂ.) ಆಗಿರುತ್ತದೆ.**

ಈ ಯೋಜನೆಗೆ ತಾವು ಉದಾರ ಆರ್ಥಿಕ ಸಹಾಯ ಮಾಡಿ ಸಹಕರಿಸಬೇಕೆಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ನೀವು ನೀಡುವ ದೇಣಿಗೆಯು ಆದಾಯ ತೆರಿಗೆ ಕಾಯಿದೆಯ 80G ತೆರಿಗೆ ವಿನಾಯಿತಿ ಪಡೆಯಲು ಅರ್ಹವಾಗಿರುತ್ತದೆ.

**PAN ಸಂಖ್ಯೆ, ಆಧಾರ್ ಸಂಖ್ಯೆ ಮತ್ತು ಅಂಚೆ ವಿಳಾಸ - ಇವುಗಳನ್ನು ಅಗತ್ಯವಾಗಿ ನೀಡಬೇಕು. (10,000/- ಕ್ಕಿಂತ ಹೆಚ್ಚಿನ ಮೊತ್ತವಾಗಿದ್ದಲ್ಲಿ PAN ಸಂಖ್ಯೆಯನ್ನು ನೀಡುವುದು ಅನಿವಾರ್ಯ.)** ತಮ್ಮ ದೇಣಿಗೆಯನ್ನು ನೀವು –

* ಚೆಕ್/ಡಿ.ಡಿ. ಮೂಲಕ (''Sri Ramakrishna Advaita Ashrama'' ಹೆಸರಿನಲ್ಲಿ) ಯಾವ ಉದ್ದೇಶಕ್ಕಾಗಿ ದೇಣಿಗೆ ಇತ್ಯಾದಿ ವಿವರಗಳಿರುವ ಪತ್ರದೊಂದಿಗೆ ಕಳುಹಿಸಬಹುದು.

* ಅಥವಾ, ಇಲೆಕ್ಟ್ರಾನಿಕ್ ವರ್ಗಾವಣೆ ಮೂಲಕ ಕಳುಹಿಸಿದ ಬಳಿಕ kalady@rkmm.org ಈ ವಿಳಾಸಕ್ಕೆ ಇ-ಮೇಲ್ ಮೂಲಕ ತಮ್ಮ ಹೆಸರು, ಪೂರ್ಣ ವಿಳಾಸ, ಫೋನ್ ಸಂಖ್ಯೆ ಇವನ್ನು ಇ-ವರ್ಗಾವಣೆಯ ವಿವರಗಳು, ತಮ್ಮ PAN ಸಂಖ್ಯೆ, ಆಧಾರ್ ಸಂಖ್ಯೆ ಇತ್ಯಾದಿಗಳನ್ನು ತಿಳಿಸಿಕೊಡಬೇಕು. ಬ್ಯಾಂಕ್ ಖಾತೆ ನಂ. ಹಾಗೂ ಇತರ ವಿವರಗಳಿಗೆ ಮಠದ ಕಚೇರಿಯನ್ನು ಬೆಳಿಗ್ಗೆ 9.00 ರಿಂದ ಸಂಜೆ 5.30ರ ಒಳಗಾಗಿ ಸಂಪರ್ಕಿಸಬಹುದು. (ಫೋನ್ ನಂ. **0484-2462345**).

ಭಗವಾನ್ ಶ್ರೀರಾಮಕೃಷ್ಣರ ಆಶೀರ್ವಾದ ನಿಮ್ಮೆಲ್ಲರ ಮೇಲಿರಲಿ ಎಂಬುದೇ ನಮ್ಮ ವಿನೀತ ಪ್ರಾರ್ಥನೆ.

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಶ್ರೀವಿದ್ಯಾನಂದ
ಅಧ್ಯಕ್ಷರು